# ವಿದೇಶದಲ್ಲಿರುವ ಭಾರತೀಯ ವಿದ್ಯಾರ್ಥಿಗಳ ವಾಸಸ್ಥಳದ ಸ್ಥಾನಮಾನವನ್ನು ಪರಿಷ್ಕರಿಸಲಾಗಿದೆ

ಡಿಸೆಂಬರ್ 8, 2003

ಭಾರತೀಯ ರಿಸರ್ವ್ ಬ್ಯಾಂಕು, ವಿದೇಶದಲ್ಲಿ ವ್ಯಾಸಂಗ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳಿಂದ, ಅವರನ್ನು ಎಫ್ಇಎಂಎ ಯಡಿ, ಅನಿವಾಸಿಗಳೆಂದು ಪರಿಗಣಿಸಬೇಕೆಂಬುದಾಗಿ ಮನವಿಗಳನ್ನು ಸ್ವೀಕರಿಸುತ್ತಿದೆ. ಅವರ ವಾದದ ತಾತ್ಪರ್ಯವೇನೆಂದರೆ, ಅವರು ವಿದ್ಯಾರ್ಥಿಗಳಾಗಿದ್ದಾಗ್ಯೂ, ವಾಸ್ತವವಾಗಿ, ಭಾರತದಲ್ಲಿರುವ ಅವರ ಮನೆಯವರು ಕಳುಹಿಸುವ ಹಣದ ಮೇಲೆ, ಅವರ ಖರ್ಚಿನ ಹೆಚ್ಚಿನ ಭಾಗಕ್ಕೆ ಅವಲಂಬಿತರಾಗಿಲ್ಲ. ಆಗಾಗ್ಗೆ, ಕೆಲಸ ಮಾಡಲು ಅವರನ್ನು ಅನುಮತಿಸಲಾಗುವುದು ಹಾಗೂ ಹಣಕಾಸಿಗೆ ಸಂಬಂಧಿಸಿದ ಕೆಲವೊಂದು ವ್ಯವಹಾರಗಳನ್ನು ಕೈಗೊಳ್ಳಬೇಕಾಗುತ್ತದೆ. ಆದುದರಿಂದ, ಆ ಪರಿಭಾಷೆಯನ್ನು ಪರಿಷ್ಕರಿಸುವ ಅಗತ್ಯತೆಯಿದೆಯೆಂದು ಒತ್ತಿ ಹೇಳಿದ್ದಾರೆ. ಎಫ್ಇಎಂಎ ಯಡಿ ನಿವಾಸಿ ಪರಿಭಾಷೆ ಮತ್ತು ಖಾಯಂ ಆಗಿ ನೆಲೆಸಿಲ್ಲದಿದ್ದರೂ, ಅನಿರ್ದಿಷ್ಟ ಅವಧಿಗೆ ವಿದೇಶದಲ್ಲಿ ವಾಸಿಸಬೇಕಾದ ವಿದ್ಯಾರ್ಥಿಯ ಉದ್ದೇಶವನ್ನು ಗಣನೆಗೆ ತೆಗೆದುಕೊಂಡು, ಎಫ್ ಇ ಎಂಎ ದೃಷ್ಟಿಕೋನದಿಂದ, ಅವರನ್ನು ಇನ್ನು ಮುಂದೆ, ಅನಿವಾಸಿಗಳೆಂದು ಪರಿಗಣಿಸಲು ನಿರ್ಣಯಿಸಿದೆ. ಹೀಗಾದರೂ, ಅನಿವಾಸಿ ವಿದ್ಯಾರ್ಥಿಗಳು, ಭಾರತದಿಂದ ಹಣವನ್ನು ಈ ಕೆಳಕಂಡಂತೆ ಸ್ವೀಕರಿಸಲು ಅರ್ಹರಾಗಿರುತ್ತಾರೆ:

(i) ಪೋಷಣೆಗಾಗಿ ಸ್ವಯಂ ಘೋಷಣೆಯ ಮೇಲೆ, ಭಾರತದಲ್ಲಿರುವ ಹತ್ತಿರದ ಸಂಬಂಧಿಗಳಿಂದ 100000 ಅಮೇರಿಕನ್ ಡಾಲರ್ ವರೆಗೆ, ಅದು, ಅವರ ವ್ಯಾಸಂಗದ ಬಗ್ಗೆ ಹಣ ಕಳುಹಿಸುವುದನ್ನು ಸಹಾ ಒಳಗೊಳ್ಳುತ್ತದೆ;

(ii) ಭಾರತದಲ್ಲಿ ಅಧಿಕೃತ ವ್ಯಾಪಾರಿ ಬ್ಯಾಂಕ್‌ಗಳೊಂದಿಗೆ ಇಟ್ಟುಕೊಂಡು ಬಂದಿರುವ ಅವರ ಖಾತೆಗಳ ಮಾರಾಟ ಉತ್ಪತ್ತಿಗಳು/ಬಾಕಿಗಳ ಪೈಕಿ ಒಂದು ಮಿಲಿಯನ್ ಅಮೇರಿಕನ್ ಡಾಲರ್ (ಯುಎಸ್ ಡಿ) ವರೆಗೆ,

(iii) ಎಫ್ ಇ ಎಂ ಎ ಯಡಿ, ಅನಿವಾಸಿ ಭಾರತೀಯರಿಗೆ ಲಭ್ಯವಿರುವ ಇತರ ಎಲ್ಲಾ ಸೌಲಭ್ಯಗಳು

(iv) ವಿದ್ಯಾರ್ಥಿಗಳು (ಭಾರತದ ನಿವಾಸಿಗಳ ಹಾಗೆ) ಪಡೆದ ಶೈಕ್ಷಣಿಕ ಮತ್ತು ಇತರ ಸಾಲಗಳು ಮುಂದುವರಿಯಲು ಅನುಮತಿಸಲಾಗುವುದು.

ಈ ಸೂಚನೆಗಳು, ಅವರ ವ್ಯಾಸಂಗವನ್ನು ಮುಂದುವರಿಸುವುದಕ್ಕೆ ಸಂಬಂಧಿಸಿದಂತೆ, ಅಸ್ತಿತ್ವದಲ್ಲಿರುವ ವಿದೇಶಿ ವಿನಿಮಯ ಹಣ ಕಳುಹಿಸುವ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಯಾವುದೇ ರೀತಿಯಲ್ಲಿ ಪರಿಣಾಮ ಬೀರುವುದಿಲ್ಲ ಎಂದು ಸಹಾ ಸ್ಪಷ್ಟೀಕರಿಸಲಾಗಿದೆ.

ಅಜಿತ್ ಪ್ರಸಾದ್
ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2003–2004/710